**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ಯೋ(8): ಭೂ.ಸ್ವಾಧೀನ/3/2009-10 23-5-2009

ಜ್ಞಾಪನ Uploaded on 25-5-2009 U'mode

ವಿಷಯ: 2009-10 ನೇ ಸಾಲಿನ ಭೂಸ್ವಾಧೀನಕ್ಕಾಗಿ ನಿಗದಿಯಾಗಿರುವ ಅನುದಾನವನ್ನು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ನಿವೇಶನ ಖರೀದಿಗಾಗಿ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ : ಇಡಿ 76 ಯೋಯೋಕ 2009 ದಿ:28-4-2009.
2. ಈ ಕಚೇರಿ ಸಮಪತ್ರ ಸಂಖ್ಯೆ ದಿ: 13-5-2009.

*-*-*-*-*

2009-10 ನೇ ಸಾಲಿಗೆ ಭೂ ಸ್ವಾಧೀನಕ್ಕಾಗಿ ನಿಗದಿಯಾಗಿರುವ ಅನುದಾನ ರೂ.50.00ಲಕ್ಷಗಳಲ್ಲಿ ರೂ37.53 ಲಕ್ಷಗಳನ್ನು ಹಂಚಿಕೆ ಮಾಡಿರುವುದು ಸರಿಯಷ್ಟೆ. ಸದರಿ ಅನುದಾನದಲ್ಲಿ ಪ್ರಸ್ತುತ 1/3 ನೇ ಭಾಗದ ಮೊತ್ತ ರೂ. 16.57 ಲಕ್ಷಗಳಿಗೆ ಮಾತ್ರ ಹಂಚಿಕೆ ಮಾಡಬೇಕಾಗಿರುತ್ತದೆ. ಉಲ್ಲೇಖಿತ ಪತ್ರ 2 ರಲ್ಲಿ ಹಂಚಿಕೆ ಮಾಡಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೋಟೆಬಾಗಿಲು, ಉಡುಪಿ ಜಿಲ್ಲೆ ಹಾಗೂ ಸರ್ಕಾರಿ ಪ್ರೌಢಶಾಲೆ ತಾರಾಫೈಲ್ ಗುಲ್ಬರ್ಗ ಜಿಲ್ಲೆ ಹೊರತು ಪಡಿಸಿ ಬೆಂಗಳೂರು ಉತ್ತರ ಜಿಲ್ಲೆಗೆ 1/3 ನೇ ಭಾಗದ ಮೊತ್ತಕ್ಕೆ ಹಂಚಿಕೆ ಮಾಡಿದೆ ಹಾಗೂ ಸರ್ಕಾರಿ ಪ್ರೌಢಶಾಲೆ ಎಂ.ಎಸ್.ಕೆ ಮಿಲ್ ಗುಲ್ಬರ್ಗ ಜಿಲ್ಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕುಳಗೇರಿ ಬಾದಾಮಿ ತಾ ಬಾಗಲಕೋಟೆ ಜಿಲ್ಲೆಗೆ ಸಂಪೂರ್ಣ ಮೊತ್ತಕ್ಕೆ ಈ ಕೆಳಕಂಡಂತೆ ಬಿಡುಗಡೆ ಮಾಡಿದೆ. ಸಂಬಂಧ ಪಟ್ಟ ಜಿಲ್ಲಾ ಉಪನಿರ್ದೇಶಕರು ಈ ಕೆಳಕಂಡ ಅನುದಾನವನ್ನು ಸಿ.ಟಿ.ಎಸ್-8 ಬಿಲ್ಲಿನ ಮೂಲಕ ಸೆಳೆಯಲು ತಿಳಿಸಿದೆ. ಈ ಮೇಲೆ ತಿಳಿಸಿ ಕೈಬಿಡಲಾದ ಶಾಲೆಗಳಿಗೆ ಹಾಗೂ ಬೆಂಗಳೂರು ಉತ್ತರ ಜಿಲ್ಲೆಯ ಉಳಿಕೆ ಮೊತ್ತಕ್ಕೆ ಮುಂದಿನ ಸರ್ಕಾರದ ಆದೇಶದ ನಂತರ ಬಿಡುಗಡೆ ಮಾಡಲಾಗುವುದು.

| ಕ್ರ.ಸಂ | ವಿವರ<br>ಲೆ.ಶೀ-2202-02-800-1-10-059 | ಬಿಡುಗಡೆ ಮಾಡಬೇಕಾದ ಅನುದಾನ |
|---|---|---|
| 1 | ಸರ್ಕಾರಿ ಮಾದರಿ ಪ್ರಾಥಮಿಕ ಪಾಠಶಾಲೆ ಪೀಣ್ಯಾ ಬೆಂಗಳೂರು ಉತ್ತರ ಜಿಲ್ಲೆ | ರೂ. 7.79 |
| 2 | ಸರ್ಕಾರಿ ಪ್ರೌಢಶಾಲೆ ಎಂಎಸ್.ಕೆ.ಮಿಲ್ ಗುಲ್ಬರ್ಗ ಜಿಲ್ಲೆ | ರೂ.5.00 |
| 3 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕುಳಗೇರಿ ಬಾದಾಮಿ ತಾ ಬಾಗಲಕೋಟೆ ಜಿಲ್ಲೆ | ರೂ.3.78 |
| | ಒಟ್ಟು | **ರೂ.16.57** |

ನಿರ್ದೇಶಕರು(ಪ್ರೌಢಶಿಕ್ಷಣ)

ಪ್ರತಿಯನ್ನು:

1. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ , ಬೆಂಗಳೂರು ಉತ್ತರ ಜಿಲ್ಲೆ/ ಗುಲ್ಬರ್ಗ ಜಿಲ್ಲೆ /ಬಾಗಲಕೋಟೆ ಜಿಲ್ಲೆ / ಉಡುಪಿ ಜಿಲ್ಲೆ ಇವರಿಗೆ ಸೂಕ್ತ ಕ್ರಮಕ್ಕಾಗಿ
2. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು
3. ಉಪನಿರ್ದೇಶಕರು, ಖಜಾನೆ ನೆಟ್‌ವರ್ಕ್ ಮ್ಯಾನೇಜ್ ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು ಇವರಿಗೆ ಗಣಕೀಕರಣ ಮಾಡಲು ಕೋರಿದೆ.
4. ಯೋ(1) ಸಹಾಯಕರಿಗೆ ಸೂಕ್ತಕ್ರಮಕ್ಕಾಗಿ
5. ಕಚೇರಿ ಪ್ರತಿ